# ಕನ್ನಡ ಪೋಸ್ಟ್

ಸಂಪಾದಕ : ಮಂಜು ಬನವಾಸೆ

KANNADA POST

ಇದು ಸುದ್ದಿ ವಿಳಾಸ

ಕನ್ನಡ ದಿನಪತ್ರಿಕೆ

ಹಾಸನ | E-mail : kannadapostnews@gmail.com | / ಕನ್ನಡ post | Price: ₹1

Vol.No.02 | Issue. 207 | Pages. 2 | Date: 26-07-2026, SUNDAY | RNI NO: KARKAN/2024/89601 | Kannada Daily

ಸಂಪುಟ : 02 - ಸಂಚಿಕೆ : 207 - ಪುಟಗಳು : 2 | 26-07-2026 | ಭಾನುವಾರ | Ph: 8762954248 | ದರ : ₹1


# ಡಿಸಿಸಿ ಅಧ್ಯಕ್ಷರ ಆಯ್ಕೆಗೆ ಅಭಿಪ್ರಾಯ ಸಂಗ್ರಹ

## ಸಂಘಟನಾ ಸೃಜನ್ ಅಭಿಯಾನಕ್ಕೆ ಚಾಲನೆ | ತಾಲೂಕುವಾರು ಮಾಹಿತಿ ಸಂಗ್ರಹ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕಾಂಗ್ರೆಸ್ ಪಕ್ಷವನ್ನು ತಳಮಟ್ಟದಿಂದ ಸಂಘಟಿಸಲು ಮತ್ತು ಎಲ್ಲರ ಅಭಿಪ್ರಾಯ ಪಡೆದು ಜಿಲ್ಲಾಧ್ಯಕ್ಷರನ್ನು ನೇಮಕ ಮಾಡುವ ಉದ್ದೇಶದಿಂದ ಜಿಲ್ಲೆಯಲ್ಲೂ ಸಂಘಟನಾ ಸೃಜನ್ ಅಭಿಯಾನ ಆರಂಭಿಸಲಾಗಿದೆ ಎಂದು ಎಐಸಿಸಿಯಿಂದ ವೀಕ್ಷಕಿ ಹಾಗೂ ತಮಿಳುನಾಡು ಸಂಸದೆ ಆರ್.ಸುಧಾ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಶನಿವಾರ ಮಾತನಾಡಿದ ಅವರು, ರಾಜ್ಯ ಮಟ್ಟದಲ್ಲಿ ಸಿಎಂ ಹಾಗೂ ಇತರರು ಅಭಿಯಾನಕ್ಕೆ ಚಾಲನೆ ನೀಡಿದ್ದಾರೆ. ಜಿಲ್ಲೆಯಲ್ಲಿ ಆರಂಭಿಸಲಾಗಿದೆ. ಈ ಅಭಿಯಾನ ರಾಷ್ಟ್ರಾದ್ಯಂತ ನಡೆಯುತ್ತಿದೆ. ಇದರ ಮುಖ್ಯ ಉದ್ದೇಶ ಕಾಂಗ್ರೆಸ್ ಪಕ್ಷವನ್ನು ಮತ್ತಷ್ಟು ಬಲಿಷ್ಟಗೊಳಿಸುವುದು, ನಾಯಕತ್ವ ಬಲಗೊಳಿಸುವುದು, ಈ ವೇಳೆ ಯಾರು ಡಿಸಿಸಿ ಅಧ್ಯಕ್ಷರಾಗಬೇಕೆಂದು

ಬ್ಲಾಕ್ ಕಾಂಗ್ರೆಸ್ ಹಂತ, ಗ್ರಾ.ಪಂ. ಮಟ್ಟದಿಂದಲೂ ಅಭಿಪ್ರಾಯ ಸಂಗ್ರಹ ಮಾಡಲಾಗುವುದು ಎಂದರು.

ಅದಕ್ಕಾಗಿ ಜಿಲ್ಲೆಯ ಏಳು ವಿಧಾನಸಭಾ ಕ್ಷೇತ್ರಗಳಲ್ಲೂ ಪ್ರವಾಸ ಮಾಡಲಾಗುವುದು. ತಳಮಟ್ಟದ ಕಾರ್ಯಕರ್ತನಿಂದ ಹಿಡಿದು, ಎಂಎಲ್‌ಸಿಗಳು, ಶಾಸಕರು, ಸಂಸದರು, ಮಾಜಿ ಜನಪ್ರತಿನಿಧಿಗಳೊಂದಿಗೆ ಚರ್ಚಿಸಿ ಅಭಿಪ್ರಾಯ ಸಂಗ್ರಹಿಸಲಾಗುವುದು.

ಹಾಗೆಯೇ ಸಾಮಾನ್ಯ ಕಾರ್ಯಕರ್ತನಿಂದ ಹಿಡಿದು




ಯಾರು ಬೇಕಾದರೂ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾಗಲು ಅರ್ಜಿ ಸಲ್ಲಿಸಬಹುದು. ಈ ಎಲ್ಲ ಪ್ರಕ್ರಿಯೆ ಪಾರದರ್ಶಕವಾಗಿ ನಡೆಯಲಿದೆ. ಎಲ್ಲರ ಅಭಿಪ್ರಾಯ ಸಂಗ್ರಹ ಹಾಗೂ ಡಿಸಿ ಅಧ್ಯಕ್ಷ ಹುದ್ದೆಯ ಆಕಾಂಕ್ಷಿಗಳ ಅರ್ಜಿ ಸಂಗ್ರಹಿಸಿ ಮುಂದಿನ ಆ.18 ರೊಳಗೆ ಎಐಸಿಸಿಗೆ ಸಲ್ಲಿಸಲಾಗುವುದು. ಅವರು ಮುಂದಿನ ಕ್ರಮ ಕೈಗೊಳ್ಳಲಿದ್ದಾರೆ ಎಂದರು.

ಅರಸೀಕೆರೆ ಶಾಸಕ ಕೆ.ಎಂ.ಶಿವಲಿಂಗೇಗೌಡ ಮಾತನಾಡಿ, ಬೆಳಗಾವಿಯಲ್ಲಿ ಮಹಾತ್ಮ ಗಾಂಧಿ ಕುರಿತ ಕಾರ್ಯಾಗಾರದ ಸಂದರ್ಭದಲ್ಲೇ ಈ ಅಭಿಯಾನ ಆರಂಭಿಸಲು ಉದ್ದೇಶಿಸಲಾಗಿತ್ತು.

ಬೇರು ಮಟ್ಟದಿಂದ ಕಾರ್ಯಕರ್ತರ ಅಭಿಪ್ರಾಯ ಪಡೆದು, ಹೊಸ ನಾಯಕತ್ವ ಸೃಷ್ಟಿ ಮಾಡಲು ಎಲ್ಲ ನಾಯಕರು ಸೇರಿ ಅಭಿಯಾನಕ್ಕೆ ಚಾಲನೆ ನೀಡಲಾಗಿದೆ. ಪ್ರಜಾಪ್ರಭುತ್ವ ವ್ಯವಸ್ಥೆಯಡಿ ಜನಪ್ರತಿನಿಧಿಯನ್ನು ಮತದಾರರು ಆಯ್ಕೆ ಮಾಡುತ್ತಾರೆ. ಅಂತೆಯೇ ಪಕ್ಷದ ಅಧ್ಯಕ್ಷರ ಆಯ್ಕೆ ಕಾರ್ಯಕರ್ತರು, ಮುಖಂಡರಿಂದ ಆಗಲಿ ಎಂದು ಈ ಹೆಜ್ಜೆ ಇಡಲಾಗಿದೆ ಎಂದರು.

ಅದಕ್ಕಾಗಿಯೇ ವೀಕ್ಷಕರನ್ನು ನೇಮಕ ಮಾಡಲಾಗಿದೆ. ಅವರು ಜಿಲ್ಲೆಯಲ್ಲಿ ಪ್ರವಾಸ ಮಾಡಿ,ಆಂತರಿಕ ಸ್ಥಿತಿಗತಿ ನೋಡಿ ಪಕ್ಷ ಬಲವರ್ಧನೆ ಉದ್ದೇಶದಿಂದ ಸೂಕ್ತ ನಿರ್ಣಯ ಮಾಡಲಿದ್ದಾರೆ ಎಂದರು.

ದೇಶಕ್ಕೆ ಕಾಂಗ್ರೆಸ್ ದೊಡ್ಡ ಶಕ್ತಿಯಾಗಿ ಬೆಳೆಯಬೇಕು, ಹಿಂದೆ ಮೋದಿ ಅವರು ವಾರ್ಷಿಕ 2 ಕೋಟಿ ಉದ್ಯೋಗ ಕೊಡುತ್ತೇವೆ ಎಂದರು. ಅವರ ಭರವಸೆ ಹುಸಿಯಾಗಿದೆ, ಇದೀಗ ನಿರುದ್ಯೋಗಿಗಳ ಸಂಖ್ಯೆ ಹೆಚ್ಚಾಗಿರುವುದು ಒಂದು ಕಡೆಯಾದರೆ, ಉದ್ಯೋಗ ಗಿಟ್ಟಿಸಿಕೊಳ್ಳಲು ನಡೆಯುವ ಪರೀಕ್ಷೆಗಳಲ್ಲೂ ಅಕ್ರಮ ನಡೆಯುತ್ತಿರುವುದನ್ನು ಖಂಡಿಸಿ ವಿದ್ಯಾರ್ಥಿ ಸಮೂಹ ಹೋರಾಟಕ್ಕಿಳಿದಿದೆ. ಈ ಎಲ್ಲ ಬೆಳವಣಿಗೆ ನೋಡಿದರೆ ಮುಂದಿನ ದಿನಗಳಲ್ಲಿ ರಾಹುಲ್ ಗಾಂಧಿ ಅವರು ಪ್ರಧಾನಿಯಾಗುವ ಲಕ್ಷಣ ಗೋಚರಿಸುತ್ತಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ಎಐಸಿಸಿ ಪ್ರಧಾನ ಕಾರ್ಯದರ್ಶಿ ಸಂದೀಪ್, ವಿಧಾನ ಪರಿಷತ್ ಸದಸ್ಯೆ ಗಾಯತ್ರಿ ಶಾಂತೇಗೌಡ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಈ.ಎಚ್.ಲಕ್ಷ್ಮಣ್, ಹುಡಾ ಅಧ್ಯಕ್ಷ ಪಟೇಲ್ ಶಿವಪ್ಪ, ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ರಂಜಿತ್ ಗೊರೂರು, ಪರಾಜಿತ ಅಭ್ಯರ್ಥಿಗಳಾದ ಬನವಾಸೆ ರಂಗಸ್ವಾಮಿ, ಎಂ.ಎ.ಗೋಪಾಲಸ್ವಾಮಿ, ಶ್ರೀಧರ್ ಗೌಡ, ಮುರುಳಿ ಮೋಹನ್, ಮುಖಂಡರಾದ ಬಾಗೂರು ಮಂಜೇಗೌಡ, ಸಿ.ಎಸ್.ಪುಟ್ಟೇಗೌಡ, ಹೆಚ್.ಕೆ.ಮಹೇಶ್, ದೇವರಾಜೇಗೌಡ ಮೊದಲಾದವರಿದ್ದರು.

### ಕೇಂದ್ರದಲ್ಲಿರುವುದು ದಪ್ಪ ಚರ್ಮದ ಸರ್ಕಾರ

ಸಂಸದ ಶ್ರೇಯಸ್ ಪಟೇಲ್ ಮಾತನಾಡಿ, ದೇಶದಲ್ಲಿ ಇಂದು ವಿದ್ಯಾರ್ಥಿಗಳ ಸ್ಥಿತಿ ದಾರುಣವಾಗಿದೆ. ಡಾ.ಅಂಬೇಡ್ಕರ್ ಅವರ ಸಂವಿಧಾನ, ಪ್ರಜಾಪ್ರಭುತ್ವ ಇದೆಯಾ ಎಂಬ ಯಕ್ಷ ಪ್ರಶ್ನೆ ಮೂಡಿದೆ.

ವಿದ್ಯಾರ್ಥಿಗಳು ಸಿಡಿದಿದ್ದಾರೆ ಎಂದರೆ ಆಡಳಿತ ಯಂತ್ರ ಕುಸಿದಿದೆ ಎಂದರ್ಥ. ಈ ವರೆಗೆ ನಡೆದಿರುವ ಅಕ್ರಮಗಳ ಬಗ್ಗೆ ಎಷ್ಟು ಮಂದಿಗೆ ಶಿಕ್ಷೆಯಾಗಿದೆ ಎಂಬುದನ್ನು ಕೇಂದ್ರ ಬಹಿರಂಗ ಪಡಿಸಬೇಕು ಎಂದು ಒತ್ತಾಯಿಸಿದರು.

ದೇಶಕ್ಕೆ ಅಚ್ಚೇದಿನ್ ಬರಲಿದೆ ಎಂದು ಮೋದಿ ಹೇಳಿದರು, ಆದರೆ ಎಲ್ಲಿ ಬಂದಿದೆ ಎಂದು ಪ್ರಶ್ನಿಸಿದ ಸಂಸದರು, ರಾಹುಲ್‌ಗಾಂಧಿ ನೇತೃತ್ವದ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದರೆ ಒಳಿತಾಗಲಿದೆ ಎಂಬ ನಿರೀಕ್ಷೆ ನಮ್ಮದು ಎಂದರು.

ವಿದ್ಯಾರ್ಥಿಗಳ ಹೋರಾಟಕ್ಕೆ ನಮ್ಮ ಬೆಂಬಲ ಸದಾ ಇರಲಿದೆ, ನೊಂದವರಿಗೆ ನ್ಯಾಯ ಸಿಗಬೇಕು. ಉತ್ತಮ ದೇಶ ಕಟ್ಟುವುದು ನಮ್ಮ ಜವಾಬ್ದಾರಿ ಎಂದು ನುಡಿದರು.

---

# ಚನ್ನರಾಯಪಟ್ಟಣದಲ್ಲಿ ಇಂದು ಪತ್ರಿಕಾ ದಿನಾಚರಣೆ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ತಾಲ್ಲೂಕು ಕಾರ್ಯನಿರತ ಪತ್ರಕರ್ತರ ಸಂಘದಿಂದ ಜು.26ರ ಭಾನುವಾರ ಪಟ್ಟಣ ಹೊರವಲಯದ ಬೆಲಸಿಂದ ಶ್ರೀವನದಲ್ಲಿ ತಾಲ್ಲೂಕು ಮಟ್ಟದ ಪತ್ರಿಕಾ ದಿನಾಚರಣೆ ಆಯೋಜಿಸಲಾಗಿದೆ ಎಂದು ಸಂಘದ ತಾಲ್ಲೂಕು ಅಧ್ಯಕ್ಷ ದಯಾನಂದ್ ಶೆಟ್ಟಿಹಳ್ಳಿ ಹೇಳಿದರು.

ಶನಿವಾರ ಮಾತನಾಡಿದ ಅವರು, ವರ್ಷಕ್ಕೊಮ್ಮೆ ಪತ್ರಕರ್ತರ ಕುಟುಂಬವು ಒಂದೇ ವೇದಿಕೆಯಲ್ಲಿ ಪಾಲ್ಗೊಳ್ಳುವುದು ಪತ್ರಿಕಾ ದಿನಾಚರಣೆಯ ವಿಶೇಷವೆಂದರು. ಬೆಳಿಗ್ಗೆ 9.30 ರಿಂದ ಸಂಜೆ 5.30ರ ವರೆಗೆ ಕಾರ್ಯಕ್ರಮ ನಡೆಯಲಿದೆ. ಕಾರ್ಯಕ್ರಮ ಉದ್ಘಾಟನೆ, ಪತ್ರಕರ್ತರು ಹಾಗು ವಿತರಕರಿಗೆ ಸನ್ಮಾನ, ಎಸ್‌ಎಸ್‌ಎಲ್‌ಸಿ ಹಾಗೂ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಅಂಕ ಪಡೆದ ಪತ್ರಕರ್ತರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಮ್ಮಿಕೊಳ್ಳಲಾಗಿದೆ. ಪತ್ರಕರ್ತರ ಕುಟುಂಬದ ಸದಸ್ಯರಿಗೆ ಕ್ರೀಡಾಕೂಟ ಆಯೋಜಿಸಲಾಗಿದ್ದು ವಿಜೇತರಿಗೆ ಬಹುಮಾನ ವಿತರಿಸಲಾಗುವುದೆಂದು ತಿಳಿಸಿದರು.

ದಿನ ಪತ್ರಿಕೆಗಳ ಪ್ರದರ್ಶನ, ಕುಂಚ ಕಲಾವಿದರಿಂದ ಚಿತ್ರ ಬಿಡಿಸುವ ವಿಶೇಷ ಕಾರ್ಯಕ್ರಮ, ಬೋಟಿಂಗ್ ವ್ಯವಸ್ಥೆ ಮಾಡಲಾಗಿದೆ. ಸಂಜೆ 5 ಗಂಟೆಗೆ ಸಮಾರೋಪ ಸಮಾರಂಭ ನಡೆಯಲಿದೆಯೆಂದು ಮಾಹಿತಿ ನೀಡಿದರು.

ಸಂಸದ ಶ್ರೇಯಸ್ ಪಟೇಲ್, ಶಾಸಕ ಸಿ.ಎನ್.ಬಾಲಕೃಷ್ಣ, ರಾಜ್ಯ ಕಾರ್ಯನಿರತ ಪತ್ರಕರ್ತರ ಸಂಘದ ಅಧ್ಯಕ್ಷ ಶಿವಾನಂದ ತಗಡೂರು, ಉಪಾಧ್ಯಕ್ಷ ಹೆಚ್.ಬಿ.ಮದನಗೌಡ, ಜಿಲ್ಲಾಧ್ಯಕ್ಷ ಜೆ.ಆರ್.ಕೆಂಚೇಗೌಡ ಸೇರಿ ಇತರ ಗಣ್ಯರು ಭಾಗವಹಿಸಲಿದ್ದಾರೆ ಎಂದರು.

ಪತ್ರಕರ್ತರಾದ ಸಿದ್ದರಾಜು, ಎ.ನಟೇಶ್, ಎ.ಎಲ್.ನಾಗೇಶ್, ಶಾಮಸುಂದರ್ ಕೆ.ಅಣ್ಣೇನಹಳ್ಳಿ, ಗೋವಿಂದ, ನಾಗೇಂದ್ರರಾಯ, ಪಾಂಡುರಂಗ ಇತರರಿದ್ದರು.

---


# ಗಣೇಶ ಉತ್ಸವ: ಮೂರ್ತಿ ಮಣ್ಣಿಗೆ ಅರ್ಥಪೂರ್ಣ ಪೂಜೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಚನ್ನರಾಯಪಟ್ಟಣ: ಭಕ್ತಿ, ಶ್ರದ್ಧೆ ಹಾಗೂ ಸಾಮಾಜಿಕ ಕಾರ್ಯ ಚಟುವಟಿಕೆಗಳಿಗೆ ಚನ್ನರಾಯಪಟ್ಟಣ ಪ್ರಸನ್ನ ಗಣಪತಿ ಸೇವಾ ಸಮಿತಿ ಹೆಸರುವಾಸಿಯಾಗಿದೆ. ಅರ್ಥಪೂರ್ಣ ಕಾರ್ಯಕ್ರಮದ ಅಂಗವಾಗಿ ಆರಂಭಿಕವಾಗಿ ಮಣ್ಣಿಗೆ ಪೂಜೆ ನೆರವೇರಿಸಲಾಗಿದೆ ಎಂದು ಶಾಸಕ ಸಿ.ಎನ್.ಬಾಲಕೃಷ್ಣ ಹೇಳಿದರು.

ಪಟ್ಟಣದ ಶ್ರೀ ಪ್ರಸನ್ನ ಗಣಪತಿ ಆಸ್ಥಾನ ಮಂಟಪದಲ್ಲಿ ಸೆಪ್ಟೆಂಬರ್‌ನಲ್ಲಿ ನಡೆಯಲಿರುವ 75ನೇ ವರ್ಷದ ಗಣೇಶೋತ್ಸವ ಹಿನ್ನೆಲೆಯಲ್ಲಿ ಗಣೇಶ ಮೂರ್ತಿ ತಯಾರಿಕೆಯ ಮಣ್ಣಿನ ಪೂಜೆಯನ್ನು ಶನಿವಾರ ನೆರವೇರಿಸಿ ಮಾತನಾಡಿದರು.

ಪಟ್ಟಣದ ಗಣಪತಿ ಸೇವಾ ಸಮಿತಿಗೆ ರಾಜ್ಯದಲ್ಲೇ ವಿಶೇಷ ಸ್ಥಾನಮಾನವಿದೆ. ಜಾತ್ಯತೀತವಾಗಿ ಗಣೇಶ ಹಬ್ಬವನ್ನು ಆಚರಣೆ ಮಾಡಿಕೊಂಡು ಸರ್ವಧರ್ಮಗಳು ಒಂದೇ ಎಂಬ ಭಾವೈಕ್ಯತೆ ಸಾರಲಾಗುತ್ತಿದೆ. ಸತತ 74 ವರ್ಷಗಳಿಂದ ಗಣೇಶ ಮೂರ್ತಿಯನ್ನು ಪ್ರತಿಷ್ಠಾಪಿಸಿಕೊಂಡು ಬಂದಿರುವ ಸೇವಾ ಸಮಿತಿಯು 75ನೇ ವರ್ಷದ ಮಹೋತ್ಸವಕ್ಕಾಗಿ ಏಕಾದಶಿ ಶುಭದಿನದಂದು ಮಣ್ಣಿನ ಪೂಜೆ ನೆರವೇರಿಸಲಾಗಿದೆ ಎಂದು ತಿಳಿಸಿದರು.



50 ದಿನ ಗಣೇಶ ಮೂರ್ತಿಯನ್ನು ಇಟ್ಟು ಪೂಜೆ ಪುನಸ್ಕಾರಗಳನ್ನು ಕೈಗೊಂಡು ನಿತ್ಯ ಅನ್ನ ದಾಸೋಹ ಸೇರಿ ನಾಡು, ನುಡಿ, ಕಲೆ, ಸಾಹಿತಿ, ಸಂಸ್ಕೃತಿಗೆ ಹತ್ತಿರವಾದ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ. ತಾಲ್ಲೂಕು ಪಂಚಾಯಿತಿ ಸದಸ್ಯನಾದಾಗಿನಿಂದಲೂ ಪ್ರತಿವರ್ಷ ನೆರವೇರುವ ಗಣೇಶ ಮೂರ್ತಿ ಪ್ರತಿಷ್ಠಾನ ಕಾರ್ಯಕ್ಕೆ ತನು, ಮನ, ಧನ ಸಹಕಾರ ನೀಡುತ್ತಿದ್ದು, ಇದು ಈ ಬಾರಿಯೂ ಮುಂದುವರೆಯುತ್ತದೆ ಎಂದರು.

ಪ್ರಸನ್ನ ಗಣಪತಿ ಆಸ್ಥಾನ ಮಠದ ಭಾವಣಿಯ ದುರಸ್ತಿಗೆ ಪುರಸಭೆ ವತಿಯಿಂದ ಆರ್ಥಿಕ ನೆರವು ಒದಗಿಸಿ ದುರಸ್ತಿ ಕಾರ್ಯ ಪೂರ್ಣಗೊಂಡಿದೆ. ಮುಂಗಾರು ಮಳೆ ಕೈ ಕೊಟ್ಟ ಹಿನ್ನಲೆಯಲ್ಲಿ ತಾಲ್ಲೂಕಿನಲ್ಲಿ ತೀವ್ರ ಮಳೆಯ ಕೊರತೆ ಉಂಟಾಗಿ ಬರಗಾಲದ ಪರಿಸ್ಥಿತಿ ಎದುರಾಗಿದೆ. ರೈತರು ಸಂಕಷ್ಟದಲ್ಲಿದ್ದು ಗಣಪತಿ ಕೃಪೆಯಿಂದ ಉತ್ತಮ ಮಳೆಯಾಗಿ ಬೆಳೆ ಉತ್ತಮವಾಗಿರಲಿ-ನಾಡು ಸುಭಿಕ್ಷವಾಗಿರಲಿ ಎಂದು ಪ್ರಾರ್ಥಿಸಿದರು.

ಗಣಪತಿ ಸೇವಾ ಸಮಿತಿ ಅಧ್ಯಕ್ಷ ಸಿ.ಎನ್. ಅಶೋಕ್ ಮಾತನಾಡಿ, ಕಳೆದ ಸಾಲಿನಂತೆ ಈ ಬಾರಿ 48 ದಿನ ಮೂರ್ತಿಯನ್ನು ಪ್ರತಿಷ್ಟಾಪಿಸಲಾಗುವುದು. ಪ್ರತಿದಿನ ಅನ್ನ ಸಂತರ್ಪಣೆ, ಪೂಜೆ, ಸಾಂಸ್ಕೃತಿಕ ಕಾರ್ಯಕ್ರಮಗಳ ಆಯೋಜನೆಯೊಂದಿಗೆ ಕಾರ್ಯಕ್ರಮವನ್ನು ರೂಪಿಸುವ ಸಂಕಲ್ಪ ಮಾಡಲಾಗಿದೆ. ರಜತ ಮಹೋತ್ಸವ ಹಿನ್ನಲೆಯಲ್ಲಿ ಅದ್ದೂರಿ ಕಾರ್ಯಕ್ರಮವನ್ನು ನಡೆಸಲು ಆಲೋಚಿಸಿರುವುದರಿಂದ ಪಟ್ಟಣದ ಸಂಘ ಸಂಸ್ಥೆಗಳು ಸಹಕಾರ ನೀಡಿ ಯಶಸ್ಸಿಗೆ ಸಹಕರಿಸಬೇಕೆಂದು ಮನವಿ ಮಾಡಿದರು.

ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಎ.ಗೋಪಾಲಸ್ವಾಮಿ ಮಾತನಾಡಿ, ಪಟ್ಟಣದ ಗಣಪತಿ ಸೇವಾ ಸಮಿತಿ ಪಕ್ಷಾತೀತ, ಜಾತ್ಯಾತೀತವಾಗಿ ಗಣೇಶೋತ್ಸವ ಆಚರಿಸುತ್ತಿದ್ದು ರಜತ ಮಹೋತ್ಸವಕ್ಕೆ ವೈಯಕ್ತಿಕವಾಗಿ 10 ಲ.ರೂ. ದೇಣಿಗೆ ನೀಡುವುದಾಗಿ ತಿಳಿಸಿದರು.

ತಾಲ್ಲೂಕು ಬಿಜೆಪಿ ಮುಖಂಡ ಸಿ.ಆರ್. ಚಿದಾನಂದ್ ಮಾತನಾಡಿದರು, ಗುಲಸಿಂದ ಶ್ರೀ ರಾಘವೇಂದ್ರ ಮಠದ ಧರ್ಮದರ್ಶಿ ರಾಧಾಕೃಷ್ಣ, ಸುಲೋಚನ ರಾಧಾಕೃಷ್ಣ, ಗಿರೀಶ್, ಕನ್ನಡ ಸಾಹಿತ್ಯ ಪರಿಷತ್ತಿನ ತಾಲ್ಲೂಕು ಅಧ್ಯಕ್ಷ ಹಡೇನಹಳ್ಳಿ ಲೋಕೇಶ್, ಪುರಸಭಾ ಮಾಜಿ ಅಧ್ಯಕ್ಷ ಸಿ.ಎನ್.ಮೋಹನ್, ಬನಶಂಕರಿ ರಘು, ಸದಸ್ಯರಾದ ಎಸ್.ಎ.ಗಣೇಶ್, ಪ್ರಸನ್ನ ಗಣಪತಿ ಸೇವಾ ಸಮಿತಿಯ ಗೌರವಾಧ್ಯಕ್ಷ ಸಿ.ಕೆ.ಕೃಷ್ಣ, ಸದಸ್ಯರಾದ ಮನೋಹರ್, ಸತ್ಯನಾರಾಯಣ, ನಂಜುಂಡಮ್ಮೈಮ್, ಮಹದೇವ್, ಮುಖಂಡರಾದ ಮಂಜಣ್ಣ, ಗಂಗಾಧರ್, ಉಮೇಶ್, ಕಲಾವಿದ ರವೀಂದ್ರ, ಗಣೇಶ ಮೂತಿ ತಯಾರಕ ಪ್ರಸನ್ನ ಇತರರು ಹಾಜರಿದ್ದರು.

---

# ಹೆಚ್ಚಿದ ದರೋಡೆ: ಐಜಿಪಿ ಜೊತೆ ಶಾಸಕ ಸಿಮೆಂಟ್ ಮಂಜು ಮಾತುಕತೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಸಕಲೇಶಪುರ :ಸಕಲೇಶಪುರ ಹಾಗೂ ಆಲೂರು ವಿಧಾನಸಭಾ ಕ್ಷೇತ್ರದಲ್ಲಿ ಇತ್ತೀಚೆಗೆ ಹೆಚ್ಚುತ್ತಿರುವ ದರೋಡೆ ಮತ್ತು ಕಳವು ಪ್ರಕರಣಗಳ ಕುರಿತು ಶಾಸಕ ಸಿಮೆಂಟ್ ಮಂಜು ಅವರು ದಕ್ಷಿಣ ವಲಯ ಪೊಲೀಸ್ ಮಹಾ ನಿರೀಕ್ಷಕ (ಐಜಿಪಿ) ಬೋರಲಿಂಗಯ್ಯ ಅವರೊಂದಿಗೆ ದೂರವಾಣಿ ಮೂಲಕ ಮಾತುಕತೆ ನಡೆಸಿ, ಪ್ರಕರಣಗಳನ್ನು ಶೀಘ್ರ ಪತ್ತೆಹಚ್ಚುವಂತೆ ಮನವಿ ಮಾಡಿದರು.

ಕ್ಷೇತ್ರದಲ್ಲಿ ನಡೆದಿರುವ ಸರಣಿ ದರೋಡೆ ಪ್ರಕರಣಗಳು ಸಾರ್ವಜನಿಕರಲ್ಲಿ ಆತಂಕ ಉಂಟುಮಾಡಿದ್ದು, ಕಾನೂನು ಸುವ್ಯವಸ್ಥೆಯ ಮೇಲಿನ ವಿಶ್ವಾಸವನ್ನು ಮತ್ತಷ್ಟು ಬಲಪಡಿಸುವ ನಿಟ್ಟಿನಲ್ಲಿ ಪೊಲೀಸರು ತ್ವರಿತ ಹಾಗೂ ಪರಿಣಾಮಕಾರಿ ಕ್ರಮ





ಕೈಗೊಳ್ಳಬೇಕೆಂದು ಶಾಸಕರು ಒತ್ತಾಯಿಸಿದರು.

ಇತ್ತೀಚೆಗೆ ಸಕಲೇಶಪುರದಲ್ಲಿ ನಡೆದ ಮನೆ ದರೋಡೆ ಪ್ರಕರಣದ ತನಿಖೆಗೆ ವಿಶೇಷ ತನಿಖಾ ತಂಡ (ಎಸ್‌ಐಟಿ) ರಚಿಸುವಂತೆ ಸೂಚನೆ ನೀಡಿರುವುದಾಗಿ ಐಜಿಪಿ ಬೋರಲಿಂಗಯ್ಯ ಅವರು ಶಾಸಕರಿಗೆ ತಿಳಿಸಿದರು.

ಅಲ್ಲದೆ, ಆಲೂರು ತಾಲೂಕಿನ ಬಿಎಂ ರಸ್ತೆಯಲ್ಲಿ ನಡೆದ ಸುಮಾರು 20 ಲಕ್ಷ ರೂ. ಮೌಲ್ಯದ ದರೋಡೆ ಪ್ರಕರಣ ಹಾಗೂ ಬಾಳ್ಳುಪೇಟೆಯ ದೇವಿರಮ್ಮ ದೇವಸ್ಥಾನದಿಂದ ಪುರಾತನ ಮುಕುಟ ಕಳವು ಪ್ರಕರಣವನ್ನೂ ಮರುಪರಿಶೀಲನೆ ನಡೆಸಿ, ಹಳೆಯ ಹಾಗೂ ಹೊಸ ಪ್ರಕರಣಗಳ ನಡುವೆ ಯಾವುದೇ ಸಂಪರ್ಕವಿದೆಯೇ ಎಂಬುದನ್ನು ಸಮಗ್ರವಾಗಿ ತನಿಖೆ ಮಾಡುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದು ಹೇಳಿದರು.

ಅಗತ್ಯವಿದ್ದಲ್ಲಿ ಹೆಚ್ಚುವರಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಿ ತನಿಖೆಯನ್ನು ಇನ್ನಷ್ಟು ತೀವ್ರಗೊಳಿಸಲಾಗುವುದು. ದರೋಡೆ ಪ್ರಕರಣಗಳನ್ನು ಪತ್ತೆಹಚ್ಚುವುದು ಪೊಲೀಸ್ ಇಲಾಖೆಯ ಜವಾಬ್ದಾರಿಯಾಗಿದ್ದು, ಎಲ್ಲಾ ಆರೋಪಿಗಳನ್ನು ಶೀಘ್ರ ಬಂಧಿಸಿ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಐಜಿಪಿ ಬೋರಲಿಂಗೇಗೌಡ ಅವರು ಭರವಸೆ ನೀಡಿದರು. ಈ ವೇಳೆ ಮಾತನಾಡಿದ ಶಾಸಕ ಸಿಮೆಂಟ್ ಮಂಜು, ಕ್ಷೇತ್ರದ ಜನರಲ್ಲಿ ಆತ್ಮವಿಶ್ವಾಸ ಮೂಡಿಸುವ ರೀತಿಯಲ್ಲಿ ಪೊಲೀಸರು ಕಾರ್ಯನಿರ್ವಹಿಸಬೇಕು. ದರೋಡೆ ಪ್ರಕರಣಗಳನ್ನು ಶೀಘ್ರ ಪತ್ತೆಹಚ್ಚಿ ತಪ್ಪಿತಸ್ಥರನ್ನು ಬಂಧಿಸುವ ಮೂಲಕ ಕಾನೂನು ಸುವ್ಯವಸ್ಥೆ ಕಾಪಾಡಲು ಕಠಿಣ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು.

---

# ಅರ್ಹ ಮತದಾರರ ಹಕ್ಕು ರಕ್ಷಣೆಗೆ ಮನೆ-ಮನೆ ಭೇಟಿ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಕಟ್ಟಾಯ: ಮತದಾರರ ಪಟ್ಟಿಯನ್ನು ಇನ್ನಷ್ಟು ಪಾರದರ್ಶಕ, ನಿಖರ ಹಾಗೂ ವಿಶ್ವಾಸಾರ್ಹವಾಗಿಸುವ ಉದ್ದೇಶದಿಂದ ಚುನಾವಣಾ ಆಯೋಗ ಕೈಗೊಂಡಿರುವ ವಿಶೇಷ ತೀವ್ರ ಪರಿಷ್ಕರಣೆ (ಎಸ್‌ಐಆರ್) ಪ್ರಕ್ರಿಯೆ ಕುರಿತು ಸಾರ್ವಜನಿಕರಲ್ಲಿ ಜಾಗೃತಿ ಮೂಡಿಸಲು ಭಾರತೀಯ ಜನತಾ ಪಕ್ಷ ಜು. 25 ಮತ್ತು 26ರಂದು ರಾಜ್ಯಾದ್ಯಂತ ಟಿಮಹಾ ಸಂಪರ್ಕ ಅಭಿಯಾನಟಿ ಹಮ್ಮಿಕೊಂಡಿದೆ ಎಂದು ಶಾಸಕ ಸಿಮೆಂಟ್ ಮಂಜು ತಿಳಿಸಿದರು.

ಶನಿವಾರ ಕಟ್ಟಾಯ ಹೋಬಳಿಯ ವಿವಿಧ ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಎಸ್‌ಐಆರ್ ಕುರಿತು ಜಾಗೃತಿ ಸಭೆಗಳನ್ನು ನಡೆಸಿ, ಮನೆ-ಮನೆಗೆ ಭೇಟಿ ನೀಡಿ ಮತದಾರರಿಗೆ ಅರಿವು ಮೂಡಿಸಿದ ಬಳಿಕ ಮಾತನಾಡಿದ ಅವರು, ರಾಜ್ಯ ಬಿಜೆಪಿ ಅಧ್ಯಕ್ಷರ ನಿರ್ದೇಶನದಂತೆ ಸಕಲೇಶಪುರ, ಆಲೂರು ಹಾಗೂ ಕಟ್ಟಾಯ ವಿಧಾನಸಭಾ ಕ್ಷೇತ್ರದಾದ್ಯಂತ ಬಿಜೆಪಿ ಕಾರ್ಯಕರ್ತರು ಮನೆ-ಮನೆಗೆ ತೆರಳಿ



ಎಸ್‌ಐಆರ್ ಕುರಿತು ಸಮಗ್ರ ಮಾಹಿತಿ ನೀಡುತ್ತಿದ್ದಾರೆ. ಯಾವುದೇ ಅರ್ಹ ಮತದಾರರ ಹೆಸರು ಮತದಾರರ ಪಟ್ಟಿಯಿಂದ ಹೊರಗುಳಿಯದಂತೆ ಅಗತ್ಯ ದಾಖಲೆಗಳು ಹಾಗೂ ನೋಂದಣಿ ಪ್ರಕ್ರಿಯೆ ಕುರಿತು ಜನರಿಗೆ ಮಾಹಿತಿ ನೀಡಲಾಗುತ್ತಿದೆ ಎಂದು ಹೇಳಿದರು.

ಪ್ರಜಾಪ್ರಭುತ್ವದ ಬಲಿಷ್ಟ ಅಡಿಪಾಯವೇ ಮತದಾರರ ಪಟ್ಟಿ. ಪ್ರತಿಯೊಬ್ಬ ಅರ್ಹ ನಾಗರಿಕರ ಹೆಸರು ಮತದಾರರ ಪಟ್ಟಿಯಲ್ಲಿ ಸೇರ್ಪಡೆಯಾಗಬೇಕು. ಅದೇ ವೇಳೆ ಅನರ್ಹ ಹೆಸರುಗಳನ್ನು ತೆರವುಗೊಳಿಸುವ ಮೂಲಕ ಮತದಾರರ ಪಟ್ಟಿಯನ್ನು ಶುದ್ಧೀಕರಿಸುವುದು ಚುನಾವಣಾ ಆಯೋಗದ ಉದ್ದೇಶವಾಗಿದೆ. ಈ ಪ್ರಕ್ರಿಯೆಯಲ್ಲಿ ಸಾರ್ವಜನಿಕರು ಸಕ್ರಿಯವಾಗಿ ಭಾಗವಹಿಸಿ ಅಧಿಕಾರಿಗಳಿಗೆ ಅಗತ್ಯ ಸಹಕಾರ ನೀಡಬೇಕು ಎಂದು ಮನವಿ ಮಾಡಿದರು.

ಕ್ಷೇತ್ರದ ಎಲ್ಲಾ ಬಿಜೆಪಿ ಪದಾಧಿಕಾರಿಗಳು, ಕಾರ್ಯಕರ್ತರು ಹಾಗೂ ಸಾರ್ವಜನಿಕರು ಮಹಾ ಸಂಪರ್ಕ ಅಭಿಯಾನದಲ್ಲಿ ಸಕ್ರಿಯವಾಗಿ ಭಾಗವಹಿಸಿ ಎಸ್‌ಐಆರ್ ಕುರಿತು ಜನಜಾಗೃತಿ ಮೂಡಿಸುವ ಮೂಲಕ ಪ್ರಜಾಪ್ರಭುತ್ವವನ್ನು ಮತ್ತಷ್ಟು ಸದೃಢಗೊಳಿಸಬೇಕು ಎಂದು ಶಾಸಕ ಸಿಮೆಂಟ್ ಮಂಜು ಕರೆ ನೀಡಿದರು.

ಮಹಾ ಸಂಪರ್ಕ ಅಭಿಯಾನದ ಅಂಗವಾಗಿ ಕಟ್ಟಾಯ ಹೋಬಳಿಯ ಶಂಕರನಹಳ್ಳಿ, ಶೆಟ್ಟಿಹಳ್ಳಿ, ಕಟ್ಟಾಯ, ಚನ್ನಂಗಿಹಳ್ಳಿ, ಅಂಕಪುರ, ಕಾರ್ಲೆ ಹಾಗೂ ಗೊರೂರು ಗ್ರಾಮ ಪಂಚಾಯಿತಿ ವ್ಯಾಪ್ತಿಯಲ್ಲಿ ಜಾಗೃತಿ ಸಭೆಗಳು ಹಾಗೂ ಮನೆ-ಮನೆ ಸಂಪರ್ಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಯಿತು.

ಬಿಜೆಪಿ ಜಿಲ್ಲಾಧ್ಯಕ್ಷ ಸಿದ್ದೇಶ್ ನಾಗೇಂದ್ರ, ಜಿಲ್ಲಾ ಬಿಜೆಪಿ ಪ್ರಧಾನ ಕಾರ್ಯದರ್ಶಿ ಕ್ಯಾಮನಹಳ್ಳಿ ರಾಜ್ ಕುಮಾರ್, ಆಲೂರು ಮಂಡಲ ಅಧ್ಯಕ್ಷೆ ಉಮಾ ರವಿಕುಮಾರ್, ಪ್ರಧಾನ ಕಾರ್ಯದರ್ಶಿ ಧ್ರುವಕುಮಾರ್, ಅಬ್ಬನ ಕೃಷ್ಣಮೂರ್ತಿ, ಆಲೂರು ತಾಲೂಕು ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಗಣೇಶ್, ಮಹಾ ಶಕ್ತಿ ಕೇಂದ್ರದ ಅಧ್ಯಕ್ಷ ನಿಂಗರಾಜ್ ಮತ್ತಿತರರಿದ್ದರು.

# ದೇಶದ ಅಭಿವೃದ್ಧಿಗೆ ಶಿಕ್ಷಣ ಭದ್ರ ಬುನಾದಿ: ಎ.ಮಂಜು

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಅರಕಲಗೂಡು: ಸಮಾಜದಲ್ಲಿ ಬದಲಾವಣೆ ಹಾಗೂ ದೇಶದ ಅಭಿವೃದ್ಧಿ ಸಾಧಿಸಬೇಕಾದರೆ ಅದು ವಿದ್ಯೆಯಿಂದ ಮಾತ್ರ ಸಾಧ್ಯ ಎಂದು ಶಾಸಕ ಎ. ಮಂಜು ತಿಳಿಸಿದರು.

ಪಟ್ಟಣದ ಹೊರವಲಯದಲ್ಲಿರುವ ಡಿ.ಕೆ. ಸಮುದಾಯ ಭವನದಲ್ಲಿ ನಡೆದ ಬಿಜಿಎಸ್ ಕಾಲೇಜಿನ ಪ್ರೆಸರ್ಸ್ ಪಾರ್ಟಿ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದ ಅವರು, ಶಿಕ್ಷಣ ಪ್ರತಿಯೊಬ್ಬರ ಜೀವನದಲ್ಲಿ ಮಹತ್ವದ ಪಾತ್ರ ವಹಿಸುತ್ತದೆ. ವಿದ್ಯೆಯನ್ನು ಯಾರೂ ಕದಿಯಲು ಸಾಧ್ಯವಿಲ್ಲ. ಉತ್ತಮ ಶಿಕ್ಷಣ ಪಡೆದ ವ್ಯಕ್ತಿ ಜೀವನದಲ್ಲಿ ಎಂದಿಗೂ ಹಿಂದುಳಿಯುವುದಿಲ್ಲ. ಶಿಕ್ಷಣವಿಲ್ಲದ ಬದುಕು ಶೂನ್ಯವಾಗುತ್ತದೆ. ಆದ್ದರಿಂದ ವಿದ್ಯಾರ್ಥಿಗಳು ಶಿಕ್ಷಣಕ್ಕೆ ಹೆಚ್ಚಿನ ಆದ್ಯತೆ ನೀಡಬೇಕು ಎಂದು ಹೇಳಿದರು.

ಮೊದಲು ನಾವು ಬದಲಾಗಬೇಕು ನಮ್ಮಲ್ಲಿ ಬದಲಾವಣೆ ಬಂದರೆ ಕುಟುಂಬದಲ್ಲಿ ಬದಲಾವಣೆ ಉಂಟಾಗುತ್ತದೆ. ಕುಟುಂಬದಲ್ಲಿ



ಬದಲಾವಣೆ ಬಂದರೆ ದೇಶದಲ್ಲಿಯೂ ಬದಲಾವಣೆ ತರಲು ಸಾಧ್ಯವಾಗುತ್ತದೆ. ಪ್ರೌಢಶಾಲೆ ಹಾಗೂ ಕಾಲೇಜು ಹಂತಗಳು ವಿದ್ಯಾರ್ಥಿಗಳ ಜೀವನದಲ್ಲಿ ಪ್ರಮುಖ ಘಟ್ಟಗಳಾಗಿದ್ದು, ವಿದ್ಯಾರ್ಥಿಗಳು ಗುರಿಯೊಂದಿಗೆ ಕನಸು ಕಾಣಬೇಕು. ಆ ಕನಸುಗಳು ಸಾಧನೆಯ ಹಾದಿಯನ್ನು ತೋರಿಸುತ್ತವೆ ಎಂದು ಕಿವಿಮಾತು ಹೇಳಿದರು.

ಆದಿಚುಂಚನಗಿರಿ ಟ್ರಸ್ಟ್‌ನ ಆಡಳಿತಾಧಿಕಾರಿ ಎ.ಟಿ. ಶಿವರಾಂ ಮಾತನಾಡಿ, ತಂದೆ-ತಾಯಿಯರ ಆಶಯಗಳನ್ನು ಈಡೇರಿಸುವುದು ಮಕ್ಕಳ ಕರ್ತವ್ಯವಾಗಿದೆ. ಅವರನ್ನು ಗೌರವಿಸಿ, ಪ್ರೀತಿಯಿಂದ ಕಾಣುವುದೇ ನಿಜವಾದ ಸಂಸ್ಕಾರ ಎಂದು ಹೇಳಿದರು.

ಆದಿಚುಂಚನಗಿರಿ ಹಾಸನ ಶಾಖಾ ಮಠದ ಶ್ರೀ ಶಂಭುನಾಥ ಸ್ವಾಮೀಜಿ ಮಾತನಾಡಿ, ಬಡತನದಲ್ಲಿದ್ದರೂ ತಂದೆ-ತಾಯಿಯರು ತಮ್ಮ ಮಕ್ಕಳನ್ನು ಉತ್ತಮ ಕಾಲೇಜುಗಳಲ್ಲಿ ಓದಿಸಲು ಶ್ರಮಿಸುತ್ತಾರೆ. ಅವರ ನಂಬಿಕೆಯನ್ನು ಉಳಿಸುವುದು ಹಾಗೂ ಕಾಲೇಜಿನ ಆಡಳಿತ ಮಂಡಳಿಯ ಗೌರವವನ್ನು ಹೆಚ್ಚಿಸುವ ರೀತಿಯಲ್ಲಿ ಉತ್ತಮ ಫಲಿತಾಂಶ ಗಳಿಸಿ ಕೀರ್ತಿ ತರುವಂತೆ ವಿದ್ಯಾರ್ಥಿಗಳಿಗೆ ಕರೆ ನೀಡಿದರು.

ಗುರುಗಳು ವಿದ್ಯಾರ್ಥಿಗಳನ್ನು ತಿದ್ದುವ ಉದ್ದೇಶದಿಂದ ನೀಡುವ ಶಿಕ್ಷೆಯನ್ನು ಮಕ್ಕಳು ಹಾಗೂ ಪೋಷಕರು ಸರಿಯಾಗಿ ಅರ್ಥಮಾಡಿಕೊಳ್ಳಬೇಕು. ಮಕ್ಕಳಿಗೆ ಶಿಕ್ಷಣದ ಜೊತೆಗೆ ಸರಿಯಾದ ಸಂಸ್ಕಾರ ನೀಡದಿದ್ದರೆ ಅವರ ಭವಿಷ್ಯಕ್ಕೆ ತೊಂದರೆಯಾಗಬಹುದು. ಗುರುವಿನ ಮಾತನ್ನು ಗೌರವಿಸುವ ವಿದ್ಯಾರ್ಥಿ ತನ್ನ ಭವಿಷ್ಯವನ್ನು ಉತ್ತಮವಾಗಿ ರೂಪಿಸಿಕೊಳ್ಳುತ್ತಾನೆ ಎಂದು ತಿಳಿಸಿದರು.

ತಹಸೀಲ್ದಾರ್ ಕೆ.ಸಿ. ಸೌಮ್ಯ ಮಾತನಾಡಿದರು. ಕಾಲೇಜಿನ ಪ್ರಾಚಾರ್ಯ ಎಚ್. ಮಹೇಶ್ ಪ್ರಾಸ್ತಾವಿಕ ನುಡಿಗಳನ್ನಾಡಿದರು. ಮಾಜಿ ಪಪಂ ಉಪಾಧ್ಯಕ್ಷೆ ರಶ್ಮಿ ಉಪಸ್ಥಿತರಿದ್ದರು.

ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ಬಳಿಕ ವಿದ್ಯಾರ್ಥಿಗಳಿಂದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಜರುಗಿದವು.

# ವಿದ್ಯುತ್ ಸಮಸ್ಯೆಗೆ ತ್ವರಿತಗತಿ ಪರಿಹಾರದ ಭರವಸೆ

**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಕಾಫಿ ಬೆಳೆಗಾರರು, ಕೈಗಾರಿಕೋದ್ಯಮಿಗಳು ಎದುರಿಸುತ್ತಿರುವ ವಿದ್ಯುತ್ ಸಂಬಂಧಿತ ಸಮಸ್ಯೆಗಳನ್ನು ಗಂಭೀರವಾಗಿ ಪರಿಗಣಿಸಿದ್ದು ವ್ಯಾಪ್ತಿಯಲ್ಲಿ ಬಗೆಹರಿಸಬಹುದಾದ ಸಮಸ್ಯೆಗಳಿಗೆ ತ್ವರಿತಗತಿಯಲ್ಲಿ ಪರಿಹಾರ ಕಲ್ಪಿಸಲಾಗುವುದೆಂದು ಕರ್ನಾಟಕ ವಿದ್ಯುತ್ ನಿಯಂತ್ರಣ ಆಯೋಗದ ಅಧ್ಯಕ್ಷ ಪಿ.ರವಿಕುಮಾರ್ ಹೇಳಿದರು.

ನಗರದ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ಭವನದಲ್ಲಿ ಶುಕ್ರವಾರ ನಡೆದ ಕೈಗಾರಿಕೆ, ಕಾಫಿ ಬೆಳೆಗಾರರು ಹಾಗೂ ವಿವಿಧ ಸಂಘಟನೆ ಪ್ರತಿನಿಧಿಗಳ ಸಭೆಯಲ್ಲಿ ಮಾತನಾಡಿದ ಅವರು, ನಮ್ಮ ವ್ಯಾಪ್ತಿ ಮೀರಿದ ಸಮಸ್ಯೆಗಳನ್ನು ಸರ್ಕಾರದ ಗಮನಕ್ಕೆ ತರಲಾಗುವುದು ಎಂದರು.




ಹಾಸನ ಸೇರಿ ಹಲವು ಜಿಲ್ಲೆಗಳಲ್ಲಿ ಕೈಗಾರಿಕೆಗಳ ಸಮಸ್ಯೆ ಇದೆ. ಕೈಗಾರಿಕೆಗಳಿಗೆ ವಿದ್ಯುತ್ ಕಡಿತವಾದರೆ ಅವರಿಗೆ ಮಾತ್ರವಲ್ಲ, ಇಲಾಖೆಯ ಆದಾಯಕ್ಕೂ ಹೊಡೆತ ಬೀಳುತ್ತದೆ. ಆದ್ದರಿಂದ ಅವರ ಸಮಸ್ಯೆಗಳನ್ನು ಆದ್ಯತೆಯ ಮೇರೆಗೆ ಪರಿಹರಿಸುವ ನಿಟ್ಟಿನಲ್ಲಿ ಕ್ರಮ ವಹಿಸಬೇಕೆಂದು ಅಧಿಕಾರಿಗಳಿಗೆ ಸೂಚನೆ ನೀಡಿದರು.

ಮಳೆಗಾಲದ ಸಂದರ್ಭದಲ್ಲಿ ವಿದ್ಯುತ್ ಕಂಬಗಳು ಹಾನಿಗೀಡಾಗುವುದು ಸಾಮಾನ್ಯ ಸಂಗತಿ.

ವಾಹನಗಳ ಡಿಕ್ಕಿಯಿಂದ ವಿದ್ಯುತ್ ಕಂಬಗಳು ಹಾನಿಯಾದರೆ ಶೀಘ್ರವಾಗಿ ಸರಿಪಡಿಸಲು ನಿರ್ವಹಣಾ ವ್ಯವಸ್ಥೆಯನ್ನು ಪರಿಣಾಮಕಾರಿಯಾಗಿ ಮಾಡಿ ದುರಸ್ತಿ ಮಾಡಬೇಕೆಂದು ಸೂಚಿಸಿದ ಅವರು, ಸಭೆಯಲ್ಲಿ ತಿಳಿಸಲಾಗಿರುವ ಎಲ್ಲಾ ಸಮಸ್ಯೆಗಳನ್ನು ಪರಿಶೀಲಿಸಲಿಸಲಾಗಿದೆ ಎಂದು ಹೇಳಿದರು.

# 33 ಗ್ರಾಂ ತೂಕದ ಚಿನ್ನಾಭರಣ ಕಳವು

ಹಾಸನ: ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಪ್ರಯಾಣಿಸುತ್ತಿದ್ದ ವೇಳೆ ಮಹಿಳೆಯ ಪರ್ಸ್‌ನಿಂದ ಸುಮಾರು 33 ಗ್ರಾಂ ತೂಕದ ಚಿನ್ನಾಭರಣ ಕದ್ದಿರುವ ಘಟನೆ ನಡೆದಿದೆ.

ಬೆಂಗಳೂರಿನ ಮಹದೇವಪುರದ ಲಕ್ಷ್ಮಿದೇವಿ ಎಂಬುವವರ ಸರ ಕಳುವಾಗಿದೆ. ಅವರು ಗೊರಗುಂಟೆಪಾಳ್ಯದಿಂದ ಚಿಕ್ಕಮಗಳೂರಿಗೆ ಬರುತ್ತಿದ್ದರು. ನಗರದ ಚನ್ನಪಟ್ಟಣ ಬೈಪಾಸ್ ಹತ್ತಿರ ಬಸ್‌ನಿಂದ ಇಳಿದ ಮಹಿಳೆಯೊಬ್ಬರು ಚಿನ್ನಾಭರಣ ಕದ್ದಿದ್ದಾರೆ ಎನ್ನಲಾಗಿದೆ.

28 ಗ್ರಾಂ ತೂಕದ ಚಿನ್ನದ ಸರ, 4 ಗ್ರಾಂ ತೂಕದ ಚಿನ್ನದ ತಾಳಿ, 1 ಗ್ರಾಂ ತೂಕದ ಚಿನ್ನದ ಗುಂಡು ಕದಿಯಲಾಗಿದೆ. ನಗರ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ಮಹಿಳೆಯರು ಉದ್ಯಮಿಯಾಗಿ ಬೆಳೆಯಬೇಕು: ಜಿಲ್ಲಾಧಿಕಾರಿ



**ಕನ್ನಡ ಪೋಸ್ಟ್ ನ್ಯೂಸ್ ನೆಟ್ವರ್ಕ್**

ಹಾಸನ: ಪ್ರಸ್ತುತ ದಿನಗಳಲ್ಲಿ ಸ್ವ-ಉದ್ಯೋಗದ ಮೂಲಕ ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಸಾಕಷ್ಟು ಅವಕಾಶಗಳಿದ್ದು, ಜಿಲ್ಲೆಯ ಮಹಿಳೆಯರು ಉದ್ಯೋಗಿಗಳಷ್ಟೇ ಅಲ್ಲದೆ ಉದ್ಯಮಿಯಾಗಿ ಬೆಳೆಯಬೇಕೆಂದು ಜಿಲ್ಲಾಧಿಕಾರಿ ಕೆ.ಎಸ್.ಲತಾಕುಮಾರಿ ಸಲಹೆ ನೀಡಿದರು.

ಭಾರತೀಯ ರಫ್ತು ಸಂಸ್ಥೆಗಳ ಒಕ್ಕೂಟ, ರಫ್ತು ಪ್ರಚಾರ ಮಿಷನ್ (ಇಪಿಎಂ), ಟ್ರೇಡ್ ಕನೆಕ್ಟ್ ಇ-ಪ್ಲಾಟ್ ಫಾರ್ಮ್, ಜಿಲ್ಲಾ ರಫ್ತು ಕೇಂದ್ರಗಳು, ಎಫ್‌ಟಿಎ ಔಟ್ರೀಚ್ ಪ್ರೋಗ್ರಾಂ (ಯುಕೆ, ಇಯು, ಓಮನ್, ಆಸ್ಟ್ರೇಲಿಯಾ ಮತ್ತು ಯುಎಇ) ನಿರ್ಯಾತ್ ಬಂಧು ಯೋಜನೆಯಡಿ ನಗರದ ಸರ್ಕಾರಿ ಇಂಜಿನಿಯರಿಂಗ್ ಕಾಲೇಜಿನಲ್ಲಿ ನಡೆದ ರಫ್ತು ಪ್ರಚಾರ ಕಾರ್ಯಾಗಾರ ಉದ್ಘಾಟಿಸಿ ಮಾತನಾಡಿದ ಅವರು, ಆಧುನಿಕ ಯುಗದಲ್ಲಿ ಸ್ವ-ಉದ್ಯೋಗ ಮಾಡಲು ಸಾವಿರಾರು ಅವಕಾಶಗಳಿವೆ. ಕೃಷಿ ಆಧಾರಿತ, ಹೈನುಗಾರಿಕೆ ಹಾಗು ಯಾವುದೇ ಸಣ್ಣ, ದೊಡ್ಡ ಉದ್ಯೋಗ ಆರಂಭಿಸಲು ಆಯ್ಕೆಗಳಿವೆ ಎಂದರು.

ಇಂದಿನ ದಿನಗಳಲ್ಲಿ ಸ್ನಾತಕೋತ್ತರ ಪದವಿ ಪಡೆದ ಶೇ. 2ರಷ್ಟು ಜನರು ಮಾತ್ರ ಸರ್ಕಾರಿ ಹುದ್ದೆ ಪಡೆಯುತ್ತಿದ್ದಾರೆ. ಯುವಕ-ಯುವತಿಯರು ತಮ್ಮದೇಯಾದ ಸ್ವಂತ ಉದ್ಯೋಗ ಪ್ರಾರಂಭಿಸಬೇಕು. ಜಿಲ್ಲೆಯಲ್ಲಿ 10,900 ಕೈಗಾರಿಕಾ ಸಂಸ್ಥೆಗಳಿದ್ದು, 1,10,000 ಜನರಿಗೆ ಉದ್ಯೋಗ ನೀಡಿದ್ದಾರೆ. ಉದ್ಯಮಿದಾರರು ಆರ್ಥಿಕವಾಗಿ ಸ್ವಾವಲಂಬನೆ ಸಾಧಿಸುತ್ತಿದ್ದಾರೆ. ಜಿಲ್ಲೆಯಲ್ಲಿ 54 ಸಾವಿರ ಕೋ.ರೂ. ಸರಕು ವಿದೇಶಗಳಿಗೆ ರಫ್ತಾಗುತ್ತಿದ್ದು ಇನ್ನಷ್ಟು ಸರಕು ರಫ್ತು ಆಗಬೇಕು ಎಂದು ತಿಳಿಸಿದರು.

ಸಣ್ಣ ಮತ್ತು ದೊಡ್ಡ ಉದ್ಯಮಗಳು ಅಂತಾರಾಷ್ಟ್ರೀಯ ಮಟ್ಟಕ್ಕೆ ಬೆಳೆಯುವುದಕ್ಕೆ ಈ ಕಾರ್ಯಾಗಾರ ಸುವರ್ಣ ಅವಕಾಶವಾಗಿದೆ. ಆದ್ದರಿಂದ ಇದರ ಪ್ರಯೋಜನವನ್ನು ಎಲ್ಲರೂ ಪಡೆಯಬೇಕು. ಹೊಸದಾಗಿ ಉದ್ಯೋಗ ಸ್ಥಾಪನೆ ಮಾಡುವ ಅಭ್ಯರ್ಥಿಗಳಿಗೆ, ರೈತರು ಹಾಗೂ ಹಳೆಯ ಉದ್ಯಮಿದಾರರ ಯಾವುದೇ ಸಮಸ್ಯೆಗಳು ಇದ್ದರೆ ಕಾರ್ಯಾಗಾರದಲ್ಲಿ ಪರಿಹಾರ ಕಂಡು ಕೊಳ್ಳಬಹುದಾಗಿದೆ ಎಂದರು.

ಜಿಲ್ಲೆಯ ಸಕಲೇಶಪುರ ತಾಲ್ಲೂಕಿನಲ್ಲಿ ವಿಶೇಷವಾದ ಕಾಫಿ ಬೀಜ ಹಾಗೂ ಸಾಂಬಾರ್ ಪದಾರ್ಥಗಳು ಅಂತರಾಷ್ಟ್ರೀಯ ಮಟ್ಟದಲ್ಲಿ ರಫ್ತು ಆಗುತ್ತಿದ್ದು, ರೈತರು ಹಾಗೂ ರೈತ ಮಹಿಳೆಯರು ಸಣ್ಣ ಉದ್ಯಮ ಆರಂಭಿಸಿದ್ದಾರೆ. ಮುಂದೆ ಆರ್ಥಿಕವಾಗಿ ಸಬಲೀಕರಣ ಸಾಧಿಸಬಹುದೆಂದರು.

# ದೊಡ್ಡಪುರ ಶಾಲೆಯಲ್ಲಿ ಇಂದು ಗುರುವಂದನೆ

ಹಾಸನ: ತಾಲ್ಲೂಕಿನ ದೊಡ್ಡಪುರದ ಸರ್ಕಾರಿ ಪ್ರೌಢಶಾಲೆಯ 2000-2001ನೇ ಶೈಕ್ಷಣಿಕ ಸಾಲಿನ ಹಳೆಯ ವಿದ್ಯಾರ್ಥಿಗಳ ಸಂಘವು ಗುರುವಂದನಾ-2026 ಕಾರ್ಯಕ್ರಮವನ್ನು ಜು. 26ರ ಭಾನುವಾರ ಆಯೋಜಿಸಿದೆ.

ಶಾಲಾ ಆವರಣದಲ್ಲಿ ಬೆಳಿಗ್ಗೆ 10 ಗಂಟೆಗೆ ಸಮಾರಂಭ ಆರಂಭವಾಗಲಿದೆ.

2000-2001ರ ಅವಧಿಯಲ್ಲಿದ್ದ ಎಲ್ಲಾ ಶಿಕ್ಷಕರನ್ನೂ ಸನ್ಮಾನಿಸಿ, ಗುರುವಂದನೆ ಸಲ್ಲಿಸಲಾಗುತ್ತದೆ. ಶಾಲೆಯ ಅಭಿವೃದ್ಧಿ ಸಲುವಾಗಿ ಹಳೆಯ ವಿದ್ಯಾರ್ಥಿಗಳು ನೀಡಬಹುದಾದ ಕೊಡುಗೆಗಳ ಕುರಿತು ಚರ್ಚೆ ನಡೆಯಲಿದೆ. ಹೆಚ್ಚಿನ ಮಾಹಿತಿಗೆ 81055 44040 (ರಮೇಶ್) ಇಲ್ಲಿಗೆ ಸಂಪರ್ಕಿಸಬಹುದು.

# ಮಳೆಗೆ ಪ್ರಾರ್ಥಿಸಿ 5 ದಿನ ಪರ್ಜನ್ಯ ಹೋಮ




ಹಾಸನ: ಮುಂಗಾರು ಮಳೆ ಕೊರತೆಯಿಂದ ಈ ಬಾರಿ ಸಮಸ್ಯೆಯಾಗಿದ್ದು ವರುಣ ದೇವನ ಆಗಮನಕ್ಕೆ ಪ್ರಾರ್ಥಿಸಿ ಜು. 28 ರಿಂದ ಆ. 1ರ ವರೆಗೆ ನಗರದ ಸೀತಾರಾಮಾಂಜನೇಯ ದೇವಸ್ಥಾನದಲ್ಲಿ ಪರ್ಜನ್ಯ ಹೋಮ ಆಯೋಜಿಸಲಾಗಿದೆ ಎಂದು ಅಖಿಲ ಭಾರತೀಯ ಬ್ರಾಹ್ಮಣ ಮಹಾಸಂಘದ ರಾಜ್ಯ ಕಾರ್ಯದರ್ಶಿ ಎಸ್. ಕೆ.ವೇಣುಗೋಪಾಲ್ ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜು.28ರ ಬೆಳಿಗ್ಗೆ 9 ಗಂಟೆಯಿಂದ ಮಧ್ಯಾಹ್ನ 12ರ ವರೆಗೆ ರಾಮನಾಥಪುರದ ಕಾವೇರಿ ನದಿಯಲ್ಲಿ ಹೋಮ ಸಂಕಲ್ಪ ನಡೆಯಲಿದೆ. ಜು.29 ರಿಂದ ಆ.1ರ ವರೆಗೆ ಸೀತಾರಾಮಾಂಜನೇಯ ದೇವಸ್ಥಾನ ಆವರಣದಲ್ಲಿ ಪೂಜಾ ಕೈಂಕರ್ಯ ಮುಂದುವರಿಯಲಿದೆ. 29ರ ಬೆಳಿಗ್ಗೆ 8ಕ್ಕೆ ಮಹನ್ಯಾಸ ಪೂರ್ವಕ ರುದ್ರಾಭಿಷೇಕ, ಮಧ್ಯಾಹ್ನ 12.30ಕ್ಕೆ ಗಣಪತಿ ಹೋಮ-ಶ್ರೀ ನವಗ್ರಹ ಹೋಮ, ಜು. 30ರ ಬೆಳಿಗ್ಗೆ ಹೋಮದ ಜೊತೆಗೆ ಶ್ರೀ ರುದ್ರಹೋಮ-ಸೌರಸೂಕ್ತ ಹೋಮ: ಪೂರ್ಣಾಹುತಿ, 31 ರಂದು ಮಧ್ಯಾಹ್ನ ಶ್ರೀ ಲಕ್ಷ್ಮಿನಾರಾಯಣ ಹೃದಯ ಹೋಮ-ಶೀಸೂಕ್ತ ಹೋಮ: ಪೂರ್ಣಾಹುತಿ ನಡೆಯಲಿದೆ ಎಂದು ವಿವರಿಸಿದರು.

ಆ.1ರ ಬೆಳಿಗ್ಗೆ 10.30ಕ್ಕೆ ಪೂರ್ಣಾಹುತಿ ನಡೆಯಲಿದ್ದು, ಸರ್ವರಿಗೂ ಮುಕ್ತ ಅವಕಾಶ ಇದೆ. ಬೆಳಿಗ್ಗೆ 11 ಗಂಟೆಗೆ ಅಖಿಲ ಭಾರತೀಯ ಬ್ರಾಹ್ಮಣ ಮಹಾಸಂಘದ ಜಿಲ್ಲಾ ಘಟಕದ ಉದ್ಘಾಟನೆಯೂ ನೆರವೇರಲಿದೆ ಎಂದು ತಿಳಿಸಿದರು.

ಸಂಘದ ಜಿಲ್ಲಾಧ್ಯಕ್ಷ ನಿಟ್ಟೂರು ಜಯರಾಂ ಮಾತನಾಡಿ, ಇದು ನಮ್ಮ ಸಂಘದ ಮೊದಲ ಕಾರ್ಯಕ್ರಮವಾಗಿದ್ದು, ಎಲ್ಲರಿಗೂ ಒಳಿತಾಗಲಿ ಎಂದು ಪರ್ಜನ್ಯ ಹೋಮ ಆಯೋಜಿಸಿದ್ದೇವೆ. ಶೃಂಗೇರಿಯ 25 ಪುರೋಹಿತರು ಪೂಜೆಯಲ್ಲಿ ಭಾಗಿಯಾಗಲಿದ್ದಾರೆ ಎಂದರು.

ಸುದ್ದಿಗೋಷ್ಠಿಯಲ್ಲಿ ಸಂಘದ ಉಪಾಧ್ಯಕ್ಷೆ ಮಂಜುಳಾ, ಪ್ರಧಾನ ಕಾರ್ಯದರ್ಶಿ ನರಸಿಂಹಶರ್ಮಾ, ಕಾರ್ಯದರ್ಶಿ ಅನಂತ ಶರ್ಮಾ ಹಾಜರಿದ್ದರು.

## ತ್ಯಾಗದ ಕಾರ್ಗಿಲ್, ನ್ಯಾಯದ NEET ವಿಜಯ ? ಭಾರತದ ಹೆಮ್ಮೆ!

ಜುಲೈ 26 ಭಾರತೀಯರ ಹೃದಯದಲ್ಲಿ ಸದಾ ಅಚ್ಚಳಿಯದ ದಿನ.ಇಂದು ನಾವು ಕಾರ್ಗಿಲ್ ವಿಜಯ ದಿವಸವನ್ನು ಹೆಮ್ಮೆಯಿಂದ ಆಚರಿಸುತ್ತಿದ್ದೇವೆ. 1999ರಲ್ಲಿ ಜಮ್ಮು ಮತ್ತು ಕಾರ್ಗಿಲ್ ವಿಜಯ ದಿವಸ್ 2026:ಗಡಿಯಲ್ಲಿ ವೀರರ ಧೈರ್ಯ?ಶಿಕ್ಷಣ ಕ್ಷೇತ್ರದಲ್ಲಿ ವಿದ್ಯಾರ್ಥಿಗಳ ನ್ಯಾಯದ ಹೋರಾಟ;ಧೈರ್ಯ,ಏಕತೆ, ಸಂಕಲ್ಪ ಮತ್ತು ಶಿಸ್ತಿನ ವಿಜಯ!ಜುಲೈ 26 ಭಾರತೀಯರ ಹೃದಯದಲ್ಲಿ ಸದಾ ಅಚ್ಚಳಿಯದ ದಿನ. ಕಾರ್ಗಿಲ್ ವಿಜಯ ದಿವಸ್ ನಮ್ಮ ವೀರ ಯೋಧರ ಶೌರ್ಯ,ತ್ಯಾಗ ಮತ್ತು ದೇಶಪ್ರೇಮವನ್ನು ಸ್ಮರಿಸುವ ಪವಿತ್ರ ದಿನವಾಗಿದೆ. 1999ರಲ್ಲಿ ಕಾರ್ಗಿಲ್ ಯುದ್ಧದ ಸಂದರ್ಭದಲ್ಲಿ ಭಾರತೀಯ ಸೇನೆಯು ಆಆಪರೇಷನ್ ವಿಜಯ್‌ಟಿ ಮೂಲಕ ದುರ್ಗಮ ಪರ್ವತಗಳು,ಪ್ರತಿಕೂಲ ಹವಾಮಾನ ಮತ್ತು ಅನೇಕ ಸವಾಲುಗಳ ನಡುವೆಯೂ ಅಚಲ ಧೈರ್ಯ,ಶಿಸ್ತು ಮತ್ತು ಸಂಕಲ್ಪದಿಂದ ದೇಶದ ಗೌರವವನ್ನು ಕಾಪಾಡಿತು. ಕ್ಯಾಪ್ಟನ್ ವಿಕ್ರಂ ಬಾತ್ರಾ, ಲೆಫ್ಟಿನೆಂಟ್ ಮನೋಜ್ ಕುಮಾರ್ ಪಾಂಡೆ,ಗ್ರೆನೇಡಿಯರ್ ಯೋಗೇಂದ್ರ ಸಿಂಗ್ ಯಾದವ್,ರೈಫಲ್‌ಮನ್ ಸಂಜಯ್ ಕುಮಾರ್ ಸೇರಿದಂತೆ ಅನೇಕ ವೀರರ ತ್ಯಾಗ ಭಾರತದ ಇತಿಹಾಸದಲ್ಲಿ ಚಿನ್ನದ ಅಕ್ಷರಗಳಲ್ಲಿ ಬರೆಯಲಾಗಿದೆ.ಇದೇ ಮೌಲ್ಯಗಳನ್ನು ಪ್ರತಿಬಿಂಬಿಸುವಂತೆ, ಓಇಇಖಿ ಪರೀಕ್ಷೆಯಲ್ಲಿ ನ್ಯಾಯಯುತ ಅವಕಾಶ,ಪಾರದರ್ಶಕತೆ ಮತ್ತು ಸಮಾನತೆಯನ್ನು ಕೋರಿ ವಿದ್ಯಾರ್ಥಿಗಳು ತಮ್ಮ ಧ್ವನಿಯನ್ನು ಶಾಂತಿಯುತವಾಗಿ ಎತ್ತಿದ್ದಾರೆ.ಕಾರ್ಗಿಲ್ ವೀರರು ದೇಶದ ಗಡಿಯನ್ನು ರಕ್ಷಿಸಲು ಹೋರಾಡಿದರೆ, ವಿದ್ಯಾರ್ಥಿಗಳು ತಮ್ಮ ಭವಿಷ್ಯ, ಕನಸುಗಳು ಮತ್ತು ಪರಿಶ್ರಮಕ್ಕೆ ನ್ಯಾಯ ದೊರಕಿಸಿಕೊಳ್ಳಲು ಹೋರಾಡುತ್ತಿದ್ದಾರೆ. ಎರಡೂ ಹೋರಾಟಗಳಲ್ಲೂ ಧೈರ್ಯ,ಏಕತೆ,ಸಂಕಲ್ಪ ಮತ್ತು ಶಿಸ್ತು ಎಂಬ ಶಾಶ್ವತ ಮೌಲ್ಯಗಳು ಅಡಗಿವೆ.ವೀರ ಯೋಧರ ತ್ಯಾಗ ಮತ್ತು ವಿದ್ಯಾರ್ಥಿಗಳ ನ್ಯಾಯದ ಮೇಲಿನ ನಂಬಿಕೆ ನಮ್ಮೆಲ್ಲರಿಗೂ ಪ್ರೇರಣೆಯಾಗಲಿ.ದೇಶದ ಏಕತೆ,ಅಖಂಡತೆ,

ಗೌರವ ಮತ್ತು ಶಿಕ್ಷಣದ ಪ್ರಾಮಾಣಿಕತೆಯನ್ನು ಕಾಪಾಡುವ ಸಂಕಲ್ಪವನ್ನು ಇಂದು ನಾವು ಮತ್ತೊಮ್ಮೆ ಕೈಗೊಳ್ಳೋಣ.ಕಾರ್ಗಿಲ್ ವೀರರ ತ್ಯಾಗಕ್ಕೆ ಮತ್ತು ನ್ಯಾಯಯುತ ಶಿಕ್ಷಣಕ್ಕಾಗಿ ಹೋರಾಡುವ ವಿದ್ಯಾರ್ಥಿಗಳ ಧೈರ್ಯಕ್ಕೆ ನಮ್ಮ ಅನಂತ ನಮನಗಳು. ಜೈ ಹಿಂದ್! ವಂದೇ ಮಾತರಂ! ವೀರರ ಧೈರ್ಯ ನಮ್ಮ ಗಡಿಯ ಶಕ್ತಿ;ವಿದ್ಯಾರ್ಥಿಗಳ ಸಂಕಲ್ಪ ನಮ್ಮ ಭವಿಷ್ಯದ ಶಕ್ತಿ;ಭಾರತದ ಕೀರ್ತಿ ಚಿರಂಜೀವಿಯಾಗಲಿ!

**– ಅಂತೋಣಿ ಮುತ್ತು ವಿ**
**ಶಿಕ್ಷಕರು, 7259675543**

## ಇತಿಹಾಸದಲ್ಲಿ ಈ ದಿನ

### ಜುಲೈ-26

1999: ಕಾರ್ಗಿಲ್ ಯುದ್ಧದಲ್ಲಿ ಪಾಕಿಸ್ತಾನದ ವಿರುದ್ಧ ಭಾರತೀಯ ಸೈನಿಕರು ಸಂಪೂರ್ಣ ಜಯಗಳಿಸಿ, ಟಿಕಾರ್ಗಿಲ್ ವಿಜಯ ದಿವಸ್‌ಟಿ ಎಂದು ಆಚರಿಸಲಾಗುತ್ತದೆ.

1965: ಮಾಲ್ಡೀವ್ಸ್ ದೇಶವು ಬ್ರಿಟಿಷರ ಆಳ್ವಿಕೆಯಿಂದ ಬಿಡುಗಡೆಗೊಂಡು ಸ್ವಾತಂತ್ರ್ಯ ಪಡೆಯಿತು.

1847: ಅಮೆರಿಕದಿಂದ ಬಿಡುಗಡೆಗೊಂಡ ಗುಲಾಮರಿಂದ ಆಫ್ರಿಕಾದಲ್ಲಿ ಲೈಬೀರಿಯಾ ದೇಶವು ಸ್ಥಾಪನೆಯಾಯಿತು.

1908: ಅಮೆರಿಕದಲ್ಲಿ ಫೆಡರಲ್ ಬ್ಯೂರೋ ಆಫ್ ಇನ್ವೆಸ್ಟಿಗೇಷನ್ ಸಂಘಟನೆಯು ರೂಪುಗೊಂಡಿತು.

**ಜನನ**

1856: ಜಾರ್ಜ್ ಬರ್ನಾರ್ಡ್ ಶಾ, ಐರ್ಲೆಂಡ್ ದೇಶದ ಪ್ರಸಿದ್ಧ ನಾಟಕಕಾರ ಮತ್ತು ನೋಬಲ್ ಪ್ರಶಸ್ತಿ ವಿಜೇತ

1857: ಕಾರ್ಲ್ ಜುಂಗ್, ಸ್ವಿಟ್ಜರ್ಲೆಂಡ್ ದೇಶದ ಪ್ರಸಿದ್ಧ ಮನೋವಿಜ್ಞಾನಿ ಮತ್ತು ಮನೋಚಿಕಿತ್ಸಕ 1943: ಮಿಕ್ ಜಾಗರ್, ಟಿದಿ ರೋಲಿಂಗ್ ಸ್ಟೋನ್ಸ್ ಟಿ ರಾಕ್ ಬ್ಯಾಂಡ್‌ನ ಪ್ರಸಿದ್ಧ ಗಾಯಕ

1964: ಸ್ಯಾಂಡ್ರಾ ಬುಲಕ್, ಆಸ್ಕರ್ ಪ್ರಶಸ್ತಿ ವಿಜೇತ ಅಮೆರಿಕದ ಪ್ರಸಿದ್ಧ ಚಲನಚಿತ್ರ ನಟಿ

**ಮರಣ**

1863: ಸ್ಯಾಮ್ ಹೂಸ್ಟನ್, ಟೆಕ್ಸಾಸ್ ಗಣರಾಜ್ಯದ ಮೊದಲ ಅಧ್ಯಕ್ಷರು ಮತ್ತು ಅಮೆರಿಕದ ರಾಜಕಾರಣಿ

1925: ವಿಲಿಯಂ ಜೆನ್ನಿಂಗ್ಸ್ ಬ್ರಯಾನ್, ಅಮೆರಿಕದ ಪ್ರಸಿದ್ಧ ವಾಗ್ಮಿ ಮತ್ತು ರಾಜಕಾರಣಿ

2022: ಇವಾನ್ ರೆಯಿಟ್ಮನ್, ಕೆನಡಾದ ಪ್ರಸಿದ್ಧ ಚಲನಚಿತ್ರ ನಿರ್ದೇಶಕ ಹಾಗೂ ನಿರ್ಮಾಪಕ

# ಹಡ್ಡಿ ಹೋಯ್!! ಹಡ್ಡಿ ಹೋಯ್!! ಅಗ್ಗಾ!! ಕುರ್ರಾ!! ಅದೂ, ಇದೂ, ಲಂಗುಲಸ್ಕು-2

**ಧನಂಜಯ ಜೀವಾಳ ಬಿ.ಕೆ.**

**ಗ್ರಾಮಾಯಣ-31**

ಹಂದಿ ಶಿಕಾರಿಗೆ ಒದರುವುದೆಂದರೆ ಸಾಧಾರಣ ಮಾತಲ್ಲ. ಇಪ್ಪತ್ತೂವತ್ತು ಜನ ಗುಂಡಿ-ಗೊಟರೆನ್ನದೆ, ಕೆಸರು-ಮುಳ್ಳೆನ್ನದೆ, ಬಾಯಿಗೆ ನಿಲುವಿಲ್ಲದೆ ಒಂದೇ ಸಮ ಗದ್ದಲವೇಳಿಸುತ್ತಾ ಮೂಲೆಮೂಲೆ ಲಂಟಾನಗಳನ್ನೆಲ್ಲಾ ಜಿಬುಕುತ್ತಾ, ಬಡಿದೆಬ್ಬಿಸುತ್ತಾ ಬರಬೇಕು. ಜ್ವರ ಬಂದು ಮಲಗಿದ್ದರೂ ಸಹಾ, ಕೈಲಾಗದಿದ್ದರೂ ಹಂದಿತುಂಡಿನ ಆಸೆಯಿಂದ ಅಥವಾ ಒದರುವಾಗ ಸಿಗಬಹುದಾದ ಸಂಭ್ರಮ, ಮಜಕ್ಕಾಗಿಯಾದರೂ ಮುದುಕರು ಮೋಟರೆನ್ನದೆ ಹಲವರು ಬಂದು ಗುಂಪಿನೊಡನೆ ಸೇರಿಕೊಂಡರು.

ಗಣನ್ ಮಂಜ, ಶಿಕಾರಿಗೆ ಮೊಗಪ್ಪಾನೂ ಬಂದಿದ್ದಾನಂತೆ; ಸರಿಸುಮಾರು ಶಿಕಾರಿ ಗ್ಯಾರಂಟೀನೇ ಎಂದ. ಮೊಗಪ್ಪ, ಈ ಸೀಮೆಗೇ ಹೆಸರಾಂತ ಶಿಕಾರಿ, ಹಾಗೆಯೇ ದೊಡ್ಡ ಯಡವಟ್ಟು ಪಾರ್ಟಿ. ಹಿಂದೊಮ್ಮೆ ಶಿಕಾರಿಗೆ ಹೋದಾಗ ತಮ್ಮ ಕಡೆಯನೊಬ್ಬನ ಮೊಣಕಾಲಿಗೆ ಗುಂಡ್ಹೊಡೆದು ಅಪರಾತಪರಾ ಮಾಡಿಕೊಂಡಿದ್ದ. ಅದೆಲ್ಲೋ ಒದರುವ ಸದ್ದು ಕೇಳಿಸುತಿತ್ತು. ಈ ಮೊಗಪ್ಪ ನಿಂತಿದ್ದ ನೇರಳೆಮರದ ಕೆಳಬಾಗದ ಕೆಂಜಿಗೆ ಜಿಗ್ಗಿನಲ್ಲಿ ಗುರ್ ಗುಸುಕ್ ಸದ್ದಿನೊಂದಿಗೆ ದೈತ್ಯಗಾತ್ರದ ಹಂದಿಯೊಂದು ಬುಡುಬುಡುಕ್ಕನೆ ಜಿಗಿದುನಿಂತಿತ್ತು. ಅರೇ ಇನ್ನೂ ಸರಿಯಾಗಿ ಗಂಡಿ ಬಂದೋಬಸ್ತೇ ಮಾಡಿಲ್ಲ, ಆಗಲೇ ಕಂಡೇಬಿಡ್ತಲ್ಲ ಎಂಬ ಸಂಭ್ರಮದಲ್ಲಿ ಮೊಗಪ್ಪ ಹಲ್ಲು ಚುಚ್ಚಲು ಪಕ್ಕದಲ್ಲೇ ಇದ್ದ ಜೇಪ್ಲುಮರದ ಮುಳ್ಳನ್ನು ಮುರಿಯಲು ಕೈಹಾಕಿದ್ದವನು ಹಿಂದೆಗೆದು ಕೋವಿಯ ಕುದುರೆಯನ್ನು ಎಳೆದೇಬಿಟ್ಟ. ತನ್ನ ಎದುರಿನಿಂದಲೇ ಹರಿಯುತ್ತಿದ್ದ ಹಳ್ಳವನ್ನು ಒದರಾಟದ ಗಡಿಬಿಡಿಯಲ್ಲಿ ಕಲ್ಲಿಂದ ಕಲ್ಲಿಗೆ ನೆಗೆಯುತ್ತಾ ದಾಟುತ್ತಿದ್ದ ಹಂದಿಗೆ ಹಿಂದಿನಿಂದಲೇ ಬಾರಿಸಿಬಿಟ್ಟಿದ್ದ ಮೊಗಪ್ಪ, ಹಿಂತೊಡೆಗೆ ಏಟುತಿಂದ ಹಂದಿ ಕಲ್ಲಿನಿಂದ ಜಾರಿ ದಢಲ್ಲೆಂದು ನೀರಿಗೆ ಬಿತ್ತು. ಹಂದಿ ಶಿಕಾರಿಯಾಯ್ತೆಂದು ಖುಷಿಯಾಗಿ ಪಕ್ಕದಗಂಡಿಯ ಸಿದ್ದೇಗೌಡ ಹಳ್ಳದ ಕಡೆಗೆ ಸದ್ದಿಲ್ಲದೆ ನಿಧಾನವಾಗಿ ಬಂದ. ನೀರಿಗೆ ಬಿದ್ದ ಹಂದಿ ಪೆಟ್ಟು ಹಿಂದಾದ್ದರಿಂದ ನೀರಿನಿಂದ ಮೇಲಕ್ಕೆ ಬಂದು ಮೊಗಪ್ಪನ ಎಡಭಾಗದಲ್ಲಿದ್ದ ದೊಡ್ಡಬಂಡೆಯ ಸಂದಿ ನುಗ್ಗಿ ಓಡಲು ಯತ್ನಿಸುತ್ತಿತ್ತು. ಹತ್ತಿರ ಹತ್ತಿರ ಎಪ್ಪತ್ ಕೇಜಿ



ಇದ್ದ ಹಂದಿ ಬಿಟ್ಟರೆ ಸಿಗೋಲ್ಲ ಎಂದ ಮೊಗಪ್ಪ ಹುಡಿದ ತೋಟ ತೆಗೆಯಲು ಪ್ರಯತ್ನಿಸಿದ. ಅವನ ದೆಸೆಗೆ ಆ ಖಾಲಿತೋಟ ಕೋವಿಯ ಹೊಳವಿಂದ ಹೊರಬಾರದಂತೆ ಜಾಮ್ ಆಗಿತ್ತು. ಹಾಗೂ ಹೀಗೂ ಮಾಡಿ ಹಲ್ಲಿನಿಂದಲೇ ತೋಟಾವನ್ನು ಕಿತ್ತುತೆಗೆದ ಮೊಗಪ್ಪ ಮೂರು ಬಕ್ಸೇಟು ಹಾಕಿ ತುಂಬಿದ ತೋಟಾವನ್ನು ಹಾಕಿದ್ದೇ, ಗಡಿಬಿಡಿಯಲ್ಲಿ ಹಳ್ಳದ ಕಲ್ಲೊಂದನ್ನು ಏರಿನಿಂತು ಕುದುರೆ ಎಳೆದು ಏರಿಸಿಯೇಬಿಟ್ಟ. ಅಷ್ಟರಲ್ಲಿ ಅನಾಹುತ ನಡೆದೇ ಹೊಯಿತು. ಕೋವಿಯಿಂದ ಗುಂಡು ಹಾರುವುದಕ್ಕೂ, ಹಾವಸೆ ಕಟ್ಟಿದ್ದ ಕಲ್ಲು ಜಾರಿ ಇವ ಮುಗ್ಗರಿಸುವುದಕ್ಕೂ, ಸಿದ್ದೇಗೌಡ ಹಂದಿ ನೋಡುವ ಕುತೂಹಲದಿಂದ ಕಲ್ಬಂಡೆ ಮರೆಯಿಂದ ಮುಂದಕ್ಕೆ ಬರುವುದಕ್ಕೂ ಸರೀ ಆಯ್ತು.

ಕಾಡಿಗೆ ಕಾಡೇ ಸ್ಥಬ್ಧವಾಗುವಂತೆ ಅಬ್ಬರಿಸಿದ ಸಿದ್ದೇಗೌಡ ನೆಗೆದವನೇ ಹಾಗೇ ಕುಸಿದ. ಅವನ ಮುಂಗಾಲು ಛಿದ್ರವಾಗಿತ್ತು. ಆ ನೋವಿನ ನಡುವೆಯೇ ಮೊಗಪ್ಪನನ್ನು ಪುಂಕಾನುಪುಂಕವಾಗಿ ಬಯ್ಯತೊಡಗಿದ. ಪ್ರಸ್ತುತ ಮೊಗಪ್ಪನ ಬದುಕಿರುವ ಸಂಬಂಧಿಗಳ ಜನ್ಮ ಜಾಲಾಡಿದ ಮೇಲೆ, ಸತ್ತಿರುವ ಅವನ ಅಪ್ಪ-ಅಮ್ಮನಿಗೂ ಪಠಣ ಶುರುಮಾಡಿದ. ಶಿಕಾರಿ ಹುಚ್ಚು ಹೇಗಿರುತ್ತೆ ಅಂದರೆ ಮೊಗಪ್ಪ ತೋಟಾ ಬದಲಾಯಿಸಿದವನೇ ಮಗ್ನೆ ಇನ್ನೊಂದ್ ಮಾತ್ ಬೈದ್ರೆ ನಿನ್ನ ತಲೇಗೇ ಏರಿಸ್ತೀನಿ ಎಂದವನೇ ಹಂದಿ ಹಿಂದೆಯೇ ಓಡಿದವನೇ ಗುರಿಹಿಡಿದು ಢಮಾರ್ ಎನ್ನಿಸಿದ. ಮೊಗಪ್ಪ ಜಾರಿಬಿದ್ದಿದ್ದರಿಂದ ಅವನ ಬಟ್ಟೆಯೆಲ್ಲಾ ಕೆಸರಾಗಿತ್ತು. ಜಾರಿದಾಗ ನೀರೊಳಗಿದ್ದ ಚೂಪಾದ ಕಲ್ಲೊಂದು ಅವನ ತೊಡೆಸಂದಿಗೆ ತಾಗಿ ಅಸಾಧ್ಯ ನೋವು ಬೇರೆ. ಅದಕ್ಕೆ ಸರಿಯಾಗಿ ಸಿದ್ದೇಗೌಡನ ಆಲಾಪ ಬೇರೆ. ಮೊಗಪ್ಪನ ಕೋವಿಯೇಟಿಗೆ ಹಂದಿ ನೆಗ್‌ನೆಗೆದ್ ಬಿತ್ತು. ಹಳ್ಳದಿಂದ ಮೇಲಕ್ಕೆ ಹತ್ತಿ ಹನಾಲ್ ತಾರೆಮರದ ಸಂದಿನಿಂದ ಕೆಂಜಿಗೆ ದಬ್ಬಲನ್ನು ನುಸಿಯಲು ಓಡುತ್ತಿದ್ದ ಹಂದಿ ಮೊದಲೇ ಹಿಂಗಾಲು ಮುರಿದ್ದಿದ್ದರಿಂದ ನಿಧಾನವಾಗಿ ಓಡುತಿತ್ತು. ಈಡು ಸರಿಯಾಗಿ ಎಡಮುಂಗಾಲಿನ ಸಂದಿಗಾಗಿತ್ತು.

ಸಿದ್ದೇಗೌಡನ ಆರ್ಭಟ ಕೇಳಿ ಗಂಡಿಕಾಯುತ್ತಿದ್ದವರು, ಒದರುತ್ತಿದ್ದವರೆಲ್ಲಾ ಏನೋ ಅನಾಹುತ ನಡೆದಿದೆ ಎಂದು ಊಹಿಸಿ ಸ್ಥಳಕ್ಕೆ ಧಾವಿಸಿದರು. ವಿಪರೀತ ನೋವು, ರಕ್ತಸ್ರಾವದಿಂದ ಸಿದ್ದೇಗೌಡ ನಿಸ್ತೇಜನಾಗಿದ್ದ. ಏನನ್ನೋ ಹೇಳಲು ಬಾಯ್ತೆರೆಯುತ್ತಿದ್ದವನಿಗೆ ಸುಸ್ತಿನಿಂದ ಸೌಂಡ್ ಜನರೇಟ್ ಆಗುತ್ತಿರಲಿಲ್ಲ.

ಹಂದಿ ಹುರುಕ್ಲಿಗೆ ಖಾರಾ ರೆಡಿಮಾಡಿಟ್ಟುಕೊಂಡು ಕಾಯುತ್ತಿದ್ದ ಊರವರಿಗೆ ಸಿದ್ದೇಗೌಡನಿಗೆ ಗುಂಡೇಟು ಬಿದ್ದ ಸುದ್ದಿ ತಲುಪಿಯೇಬಿಟ್ಟಿತು. ಅರವತ್ತೆಪ್ಪತ್ತು ಜನ ಗುಂಪಾಗ್ತಿದ್ದಂತೆ ಸಿದ್ದೇಗೌಡ ತನ್ನ ಶವಯಾತ್ರೆಗೆ ಇಷ್ಟೊಂದು ಜನ ಸೇರಿರುವರೆಂದು ಭ್ರಮಿಸಿ ಹಾಗೆಯೆ ಕಣ್ಮುಚ್ಚಿದ. ಬಂದ ಬಂದವರೇ ಊರಿನ ಹಿರಿಯರಾದ ಕರೀಗೌಡ ಹಾಗೂ ಬಾಸಯ್ಯ ಮೊಗಪ್ಪನಿಗೆ ಹಿಗ್ಗಾಮುಗ್ಗಾ ಬೈದರು. ದನಕಾಯುವ ದಾಳನಿಗೆ ಗಿಡಮೂಲಿಕೆಗಳ ಬಗ್ಗೆ ತಿಳಿದಿದ್ದರಿಂದ ಹಾಗೂ ಹೀಗೂ ಮಾಡಿ ಸೊಪ್ಪು ತಂದು ಮೂಗಿಗೆ ಸೊಪ್ಪಿನ ರಸ ಬಿಟ್ಟು ಸಿದ್ದೇಗೌಡ ಎಚ್ಚರವಾಗುವಂತೆ ಮಾಡಿದ. ಅಲ್ಲೇ ಬೆಳೆದಿದ್ದ ಸೀಮೆಸೀಗೆ ಲಂಟಾನದ ಸೊಪ್ಪನ್ನು ತರಿದುಕೊಂಡು ಬಂದ ಗಣನ್ ಮಂಜ ಅಂಗೈಗಳ ನಡುವೆ ಸೊಪ್ಪನ್ನು ತಿಕ್ಕಿ, ಒತ್ತಿ ಹಿಂಡಿ, ತೆಗೆದ ರಸವನ್ನು ಗಾಯದ ಮೇಲೆಲ್ಲಾ ಹದವಾಗಿ ಸವರಿದ. ಸೇರಿದ್ದ ಜನರೆಲ್ಲಾ ಈಗ ಸ್ವಲ್ಪ ನಿರಾತಂಕವಾಗಿ ಉಸಿರಾಡುವಂತೆ ಆಯ್ತು.

ಎಂಟ್ಹತ್ತು ಜನ ಸಿದ್ದೇಗೌಡನನ್ನು ಹೊತ್ತುಕೊಂಡು ಸೀದಾ ಡಾ. ಸಗಾಯ್ ಬಳಿ ಓಡಿದರು. ಶಿಕಾರಿಯಲ್ಲಿ ಭಾರೀ ಹುರುಪಿನಲ್ಲಿದ್ದ ಮೊಗಪ್ಪ ಈಗ ಖಿನ್ನವಾಗಿದ್ದ. ಹಂದಿತುಂಡಿನ ಆಸೆಗೆ ಎಂಥ ಕೆಲಸವಾಯ್ತು ಎಂದು ವ್ಯಥೆಪಡಲಾರಂಭಿಸಿದ. ನಿಜ ಹೇಳಬೇಕಂದ್ರೆ, ತಪ್ಪು ಯಾರದ್ದೂ ಆಗಿರಲಿಲ್ಲ. ಅದು ಸಂಭವಿಸಿತ್ತು ಅಷ್ಟೆ.

ಸರಿ, ಇನ್ನು ಹಂದಿ ರಿಪೇರಿಯಾಗಬೇಕಲ್ಲ; ಯಾರಿಗೂ ಮನಸ್ಸು ಸರಿಯಿದ್ದಂತೆ ಕಾಣಲಿಲ್ಲ. ಎಲ್ಲರಿಗೂ ಒಳಗೊಳಗೇ ಭಯ ಶುರುವಾಯ್ತು. ಸಿದ್ದೇಗೌಡ ಇನ್ನು ಒಂದು ವರ್ಷವಾದರೂ ನೆಟ್ಟಗಾಗುವಂತೆ ಕಾಣುತ್ತಿರಲಿಲ್ಲ. ತೋಟಾದಲ್ಲಿದ್ದ ಮೂರು ಬಕ್ಸೆಟ್‌ಗಳಲ್ಲಿ ಎರಡು ಮುಂಗಾಲನ್ನು ತೂರಿಕೊಂಡು ಹೋಗಿದ್ದವು. ಮೂಳೆ ಉದ್ದುದ್ದವಾಗಿ ಪುಡಿಪುಡಿಯಾಗಿತ್ತು.

ಗ್ರಾಮ ಪಂಚಾಯ್ತಿ ಎಲೆಕ್ಷನ್ನಿನಲ್ಲಿ ಬೇರೆ ಈ ಮೊಗಪ್ಪ ಸಿದ್ದೇಗೌಡನ ಎದುರಾಳಿಗೆ ಸಪೋರ್ಟ್ ಮಾಡಿದ್ದ. ಒಳಗೊಳಗೇ ಇಬ್ಬರಿಗೂ ಸರಿ ಇರಲಿಲ್ಲ. ಪೋಲೀಸ್ ಕೇಸ್, ಕೋರ್ಟ್, ಫಾರೆಸ್ಟ್ ಆಫೀಸು ಓಡಾಟ ಎಲ್ಲಾ ಯಾರಿಗೆ ಬೇಕು ಎಂದು ಅನೇಕರು ಜಾಗ ಖಾಲಿಮಾಡುವ ಅಂದಾಜಿನಲ್ಲಿದ್ದರು. ಅನೇಕ ಬಾರಿ ಶಿಕಾರಿ ಮಾಡಿ ಅನುಭವವಿದ್ದ ಹದಿನೈದಿಪ್ಪತ್ತು ಜನ ಉಳಿದವರಿಗೆ ಧೈರ್ಯ ನೀಡಿದರೆ, ಶಿಕಾರಿಯ ಹಳೇಹುಲಿ ನಂಜಪ್ಪಣ್ಣ ತಲೆಗೊಂದೊಂದು ಮಾತನಾಡುತಿದ್ದವರನು ಗದರಿಸಿ ಹಂದಿ ರಿಪೇರಿಗೆ ಸಿದ್ಧತೆ ನಡೆಸುವಂತೆ ಆಜ್ಞೆ ಹೊರಡಿಸಿದರು. (ಮುಂದುವರಿಯುವುದು)

Printed, Published and Owned by Manjunatha B.R. and Printed at PAPPAS PRINT HOUSE, BEHIND DISTRICT STADIUM, M.G.ROAD,VIDYANAGAR, HASSAN, KARNATAKA-573201 and published at No. 150, BANAVASE, SAKALESHPURA TALLUK, HASSAN DISTRICT, KARNATAKA-573201. Editor: MANJU BANAVASE. Ph: 8762954248